ROTARY SULLIA
Charter No 15757
RI Dist 3181

Rotary

Rotary Opens Opportunities

# ಪಯಸ್ವಿನಿ

ಖಾಸಗಿ ಪ್ರಸಾರದ ವಾರಪತ್ರಿಕೆ

Volume: 49 | Issue: 15 | Date: 07-10-2020

## ಕೊವಿಡ್ ನಲ್ಲಿ ಹೆಪ್ಪುಗಟ್ಟಿದ ಮನಸ್ಸಿಗೆ ಹೊಸ ಹುಮ್ಮಸ್ಸನ್ನು ನೀಡಿದ ರೋಟರಿ ರೈಡರ್ ಮೇನಿಯಾ– ರೊ.ಗಿರಿಜಾಶಂಕರ್




ಸುಳ್ಯ ರೋಟರಿ ವಾರದ ಸಭೆ 30.09.2020ರಂದು ಸಂಸ್ಥೆಯ ಅಧ್ಯಕ್ಷರಾದ ರೊ.ಗುರುರಾಜ್ ವೈಲಾಯ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ರೊ.ದಳ ಸುಭ್ರಯ ಭಟ್ ಪ್ರಾರ್ಥನೆ ಯೊಂದಿಗೆ ಆರಂಭವಾದ ಸಭೆಯಲ್ಲಿ ರೋಟರಿ ರೈಡರ್ ಮೇನಿಯಾ ದಲ್ಲಿ ಭಾಗವಹಿಸಿದವರನ್ನು ಗುರುತಿಸಿ ಗೌರವಿಸಲಾಯಿತು. ರೊ.ಗಿರಿಜಾಶಂಕರ್ ತಮ್ಮ ಅನುಭವವನ್ನು ಹಂಚಿಕೊಂಡ ಅವರು ಕೊವಿಡ್ ನಲ್ಲಿ ಹೆಪ್ಪುಗಟ್ಟಿದ ಮನಸ್ಸಿಗೆ ಹೊಸ ಹುಮ್ಮಸ್ಸನ್ನು ಈ ಕಾರ್ಯಕ್ರಮ ನೀಡಿದೆ, ಈ ಕಾರ್ಯಕ್ರಮವನ್ನು ಆಯೋಜಿಸಿದ ಜಂಟಿ ಸಂಸ್ಥೆಗಳಿಗೆ ಅಭಿನಂದನೆ ಸಲ್ಲಿಸಿದರು.

AG Elect ರೊ.ಜಿತೇಂದ್ರ ತಮ್ಮ ಪ್ರಥಮ ಜಿಲ್ಲಾ ಮೀಟಿಂಗ್ನಲ್ಲಿ ಅದ ಅನುಭವವನ್ನು ಸಭೆಯ ಮುಂದೆ ಇಟ್ಟರು. ಹಾಗೂ AG ಯಾಗಿ ಆಯ್ಕೆ ವಿಚಾರಗಳನ್ನು ಸಭೆಯಲ್ಲಿ ತಿಳಿಸಿ ತಮ್ಮ ಅವಧಿಯಲ್ಲಿ ಜಿಲ್ಲೆಯಿಂದ ಅವರಿಗೆ ವಹಿಸಿದ ಕಾರ್ಯಕ್ರಮದ ವಿವರವನ್ನು ವಿವರಿಸಿ ಮಾತ್ರ್ ಸಂಸ್ಥೆಯ ಸಹಕಾರ ಕೋರಿದರು.

2021–22 ರೋಟರಿ ವರ್ಷದ PET&SET ಇದರ ಚೇರ್ಮನ್ ಆಗಿ ಮಾಜಿ AG.Rtn.MD ಡಾ.ಕೇಶವ ಪಿ.ಕೆ. ಯವರನ್ನು ರೊ.ದಳ ಸುಬ್ರಾಯ ಭಟ್ ಸೂಚನೆ ಹಾಗೂ ರೊ.ಅಬ್ದುಲ್ ಕಲಾಂರವರ ಅನುಮೋದನೆಯೊಂದಿಗೆ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ರೊ.ಪ್ರಭಾಕರನ್ ನಾಯರ್ ರೋಟರಿಯ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಿದರು. ರಾಷ್ಟ್ರಗೀತೆ ಯೊಂದಿಗೆ ಸಭೆ ಮುಕ್ತಾಯವಾಯಿತು.

---

2019–20 ನೇ ಸಾಲಿನಲ್ಲಿ ಜನಪರ ಕಾರ್ಯಕ್ರಮಗಳನ್ನು ಸಂಘಟಿಸಿ ರೋಟರಿ ಜಿಲ್ಲೆ 3181 ರಲ್ಲಿ ಅದ್ವಿತೀಯ ಸಾಧನೆ ಮಾಡಿದ ಸುಳ್ಯ ರೋಟರಿ ಸಂಸ್ಥೆ ಗೆ ಅಂತರಾಷ್ಟ್ರೀಯ ಅಧ್ಯಕ್ಷರು ಕೊಡಮಾಡುವ Presidential Citation Award ತನ್ನದಾಗಿಸಿಕೊಂಡಿದೆ.

ಕಳೆದ ಸಾಲಿನಲ್ಲಿ ಮೂವತ್ತಕ್ಕೂ ಅಧಿಕ ಜಿಲ್ಲಾ ಪ್ರಶಸ್ತಿಗಳೊಂದಿಗೆ ಜಿಲ್ಲೆಯಲ್ಲಿ ದ್ವಿತೀಯ ಅತ್ಯುತ್ತಮ ಕ್ಲಬ್ ಅಗಿ ಹೊರಹೊಮ್ಮಲು ಕಾರಣರಾಗಿದ್ದ ಕಳೆದ ಸಾಲಿನ ರೋಟರಿ ಅಧ್ಯಕ್ಷರಾದ ರೊ.ಡಾ. ಪುರುಷೋತ್ತಮ ಹಾಗೂ ಕಾರ್ಯದರ್ಶಿಯಾಗಿ ಸನತ್ ಕಾರ್ಯನಿರ್ವಹಿಸಿದ್ದರು.




### TODAY PROGRAMMES

Rotary Information by

Rtn Prasanna K

Sub : Rotary Wheel

Talk on Drug Abuse By

Rtn Major Donor Dr Keshav PK

Venue: Rotary Community Hall

on 07/10/2020, Wednesday

@ 5:30PM



## ಅಭಿನಂದನೆಗಳು



ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಾಮರಾಜನಗರ, ಜಿಲ್ಲೆಗಳನ್ನೊಳಗೊಂಡ ಸುಮಾರು 100 ಕ್ಕೂ ಮಿಕ್ಕಿ ರೋಟರಿ ಕ್ಲಬ್ ಗಳ ರೋಟರಿ ಜಿಲ್ಲೆ 3181 ಇದರ 2021– 2022 ಸಾಲಿನ ನಿಯೋಜಿತ ಅಧ್ಯಕ್ಷ ಕಾರ್ಯದರ್ಶಿಗಳ ತರಬೇತಿ ಕಾರ್ಯಾಗಾರದ (PETS & SETS) ಜಿಲ್ಲಾ ಸಂಚಾಲಕರಾಗಿ ರೋಟರಿ ಮಾಜಿ ಅಸಿಸ್ಟೆಂಟ್ ಗವರ್ನರ್ ರೊ.ಡಾ.ಕೇಶವ ಪಿ.ಕೆ. ಯವರು ಸರ್ವಾನುಮತದಿಂದ ಆಯ್ಕೆಗೊಂಡಿರುತ್ತಾರೆ.

ಸುಳ್ಯ ರೋಟರಿಯು ಅಧ್ಯಕ್ಷರಾಗಿ ಹಲವಾರು ಜನೋಪಯೋಗಿ ಕಾರ್ಯಕ್ರಮ ವನ್ನು ಹಮ್ಮಿಕೊಂಡಿದ್ದ ಇವರು 2019–2020 ರಲ್ಲಿ ಅತ್ಯುತ್ತಮ ಅಸಿಸ್ಟೆಂಟ್ ಗವರ್ನರ್ ಆಗಿ ಜಿಲ್ಲಾಮಟ್ಟದಲ್ಲಿ ಗಮನಸೆಳೆದಿದ್ದರು.ಸುಳ್ಯ ರೋಟರಾಕ್ಟ್ ನ ಬೆಳ್ಳಿ ಹಬ್ಬದ ಸಭಾಪತಿಯಾಗಿ, ರೋಟರಿ ಚಾರಿಟೇಬಲ್ ಟ್ರಸ್ಟ್ ನ ಸಂಚಾಲಕರಾಗಿಯೂ ದುಡಿದಿರುವ ಇವರು ರೋಟರಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ.

## ಅಭಿನಂದನೆಗಳು



### ರೋಟರಿ ಝೋನ್ – 5ರ ಅಸಿಸ್ಟೆಂಟ್ ಗವರ್ನರ್ ಆಗಿ ಜಿತೇಂದ್ರ ಎನ್.ಎ. ಆಯ್ಕೆ

ನಾಲ್ಕು ಕಂದಾಯ ಜಿಲ್ಲೆಗಳನ್ನೊಳಗೊಂಡ ರೋಟರಿ ಜಿಲ್ಲೆ 3181 ಝೋನ್–5 ರ 2021– 2022 ಸಾಲಿನ ಅಸಿಸ್ಟೆಂಟ್ ಗವರ್ನರ್ ಆಗಿ ಸುಳ್ಯ ರೋಟರಿ ಕ್ಲಬ್ ಮಾಜಿ ಅಧ್ಯಕ್ಷ ಪ್ರಸ್ತುತ ರೋಟರಿ ಚಾರಿಟೇಬಲ್ ಟ್ರಸ್ಟ್ ಸಂಚಾಲಕರಾದ ರೊ. ಜಿತೇಂದ್ರ ಓಂ ರವರನ್ನು ನಿಯೋಜಿತ ಜಿಲ್ಲಾ ಗವರ್ನರ್ ರವೀಂದ್ರ ಭಟ್ ಆಯ್ಕೆ ಮಾಡಿರುತ್ತಾರೆ. ಪ್ರಸ್ತುತ ಜೋನಲ್ ಲೆಫ್ಟಿನೆಂಟ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಜಿತೇಂದ್ರ ಅವರು ನಿದ್ಯಮಲೆ ಕುಟುಂಬದವರಾಗಿದ್ದು ಹಲವಾರು ದಾರ್ಮಿಕ, ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಇವರು ಅನಂತ ಹಾಗೂ ವೇದಾವತಿ ಅನಂತ ನಿದ್ಯಮಲೆ ಯವರ ಪುತ್ರರಾಗಿರುತ್ತಾರೆ.







**Rotary year 2021_22,"The first AG Designate ZS Designate Meeting held @ Madikeri, Glimpse of the meeting,& Handovering of Appointment letter to the Zonal Leaders**




THE ROTARY FOUNDATION With a stunning contribution of $20,454,931, Rotary India is now the second highest contributor to The Rotary Foundation. Topping the list of 200 countries in the world, we have overtaken Japan , Korea , Taiwan , UK, in Rotary Year 2019-20 when it comes to funding to the TRF.""Funds and programmes like the Endowment Fund, PolioPlus Fund and others benefit immensely from contributions to #TRF










